ಅರ್ಭಟಿಸುತ್ತಲೇ ನಡು ಅಂಗಳಕ್ಕೆ ಬಂದ ಭೂತ ಜಾತಿಯ ಗುರಿಕಾರನನ್ನು ಕರೆದು... 'ನೂಲು ಹಾಕಿದವರು ಬಂದಿದ್ದಾರೆಯೇ? ಸರಿಯಾದ ಮರ್ಯಾದೆ ಸಲ್ಲಿಸಿದ್ದೀರಾ? ಎಂದು ಕೇಳಿದಾಗ... ಗುರಿಕಾರ, ಕುರ್ಚಿಯಲ್ಲಿ ಕಾಲು ಮೇಲೆ ಕಾಲು ಹಾಕಿ ಕುಳಿತು ಎಳನೀರು ಕುಡಿಯುತ್ತಿದ್ದ ಹತ್ವಾರರನ್ನು ತೋರಿಸಿದ. ಭೂತ ಹತ್ವಾರರನ್ನು ದಿಟ್ಟಿಸಿದ ಕೂಡಲೆ ಹತ್ವಾರರು ತಕ್ಷಣ ಕಾಲುಗಳನ್ನು ನೆಟ್ಟಗಿರಿಸಿ ಭೂತಕ್ಕೆ ತನ್ನ ಇರವನ್ನು ಸ್ಪಷ್ಟಪಡಿಸಿದರು.

'ಊರ ಗುತ್ತಿನ ಮನೆಯ ಶೆಟ್ಟರನ್ನು ಆಹ್ವಾನಿಸಿದ್ದೀರಾ? ತಕ್ಕ ಗೌರವ ಸಂದಿದೆಯೇ? ಬಿಲ್ಲವರ ಗುರಿಕಾರರಿಗೆ ಹೇಳಿಕೆ ನೀಡಿದ್ದೀರಾ? ಊರ ಇತರ ಸರ್ವ ಜಾತಿಯವರಿಗೆ ಅವರವರ ಮರ್ಯಾದೆಗೆ ತಕ್ಕಂತೆ ಹೇಳಿಕೆ ಮಾಡಿದ್ದೀರಾ?... ಬೀಗರನ್ನು, ಕುಟುಂಬದ ಸಮಸ್ತರೆಲ್ಲರನ್ನೂ ಸರಿಯಾದ ಕ್ರಮದಲ್ಲೇ ಬರಹೇಳಿದ್ದೀರಾ?... ಬಂದವರಿಗೆಲ್ಲಾ ತಕ್ಕ ಸನ್ಮಾನ... ಮರ್ಯಾದೆ ಸಂದಿದೆಯಾ?...' ಹೀಗೆ ಭೂತ ಗುರಿಕಾರರನ್ನು ಮತ್ತೆ ಮತ್ತೆ ಕೆದಕಿ ಕೆದಕಿ ಪ್ರಶ್ನಿಸುತ್ತಿತ್ತು. ಮೇಲ್ಜಾತಿಯವರಿಂದ ಹಿಡಿದು ಕೆಳಜಾತಿಯವರೆಗೂ ಜಾತಿಯ ಹೆಸರಿಡಿದು 'ಅವರಿಗೆಲ್ಲಾ ಮರ್ಯಾದೆ ನೀಡಿದ್ದೀರಾ' ಎಂದು ಭೂತ ಕೆದಕಿದಾಗಲೆಲ್ಲಾ ಗುರಿಕಾರ ಹಾಗೂ ಮಾಯಿಲನಿಗೆ ಎದೆಯಿಡೀ ಒಂಥರಾ ಭಯ. ಹೇಳಿಕೆಯಲ್ಲಿ ಎಲ್ಲಾದರೂ ಎಡವಿ ಬಿಟ್ಟು ಭೂತದ ಕೈಗೆ ಸಿಕ್ಕಿಹಾಕಿಕೊಳ್ಳುತ್ತೇವೋ ಎಂಬ ಭಯ.

ಕಳೆದ ಬಾರಿಯ ಕೋಲದಲ್ಲಿ ಹೀಗೆಯೇ ಒಂದು ಸನ್ನಿವೇಶ. ಮಾಯಿಲನ ಹಿರಿಯ ಮಗಳು ದಮಯಂತಿಯ ಗಂಡನ ಮನೆಯವರಿಗೆ ಯಾವುದೋ ಕಾರಣದಿಂದ ಕೋಲದ ಹೇಳಿಕೆ ತಲುಪಿರಲಿಲ್ಲ. ಭೂತ ನೆಂಟರಿಷ್ಟರು, ಬೀಗರ ಬಗ್ಗೆ ವಿಚಾರಿಸಿದಾಗ 'ಸಮಸ್ತರಿಗೂ ಹೇಳಿಕೆ ಸಮರ್ಪಕವಾಗಿ ನಡೆದಿದೆ' ಎಂದು ಗುರಿಕಾರ, ಮಾಯಿಲ ಹೇಳಿಕೊಂಡಿದ್ದರೂ ಭೂತ ಒಪ್ಪಿರಲಿಲ್ಲ. ಕೊನೆಗೆ ದಮಯಂತಿಯ ಗಂಡನೇ ಎದ್ದು ಬಂದು ತನ್ನ ಮನೆಯವರಿಗೆ ಕೋಲದ ಹೇಳಿಕೆ ಸಿಕ್ಕಿಲ್ಲ. ಆ ಬಗ್ಗೆ ತನ್ನಪ್ಪನ ಅಸಮಾಧಾನವನ್ನು ಭೂತದೆದುರೇ ಮಾವನಲ್ಲಿ ಹೇಳಿ ಮಾವನನ್ನ ಕಂಗಾಲು ಮಾಡಿದ್ದ. ಭೂತಕ್ಕೆ ತಪ್ಪು ಒಪ್ಪಿಸಿದ ಮೇಲೆಯೇ ಮತ್ತೆ ಮುಂದಿನ ಕಾರ್ಯಕ್ರಮ ಮುಂದುವರಿದಿತ್ತು. ಈ ಬಾರಿಯೂ, ಪ್ರತಿಬಾರಿಯಂತೆ ಯಾರಾದರೊಬ್ಬರು ಆಹ್ವಾನದಿಂದ ವಂಚಿತರಾಗಿದ್ದಾರೆ ಎಂಬುದು ಭೂತಕ್ಕೆ ಸ್ಪಷ್ಟ ತಿಳಿದಂತಿತ್ತು. ಭೂತ ಕೆದಕಿ ಕೆದಕಿ ಪ್ರಶ್ನಿಸಿದಾಗ ನೆರೆದವರಲ್ಲಿ ಪಿಸು ಪಿಸು ಆರಂಭ. ಕೊನೆಗೂ ಹುಡುಕಾಟ ಆರಂಭವಾಗಿ 'ಮಾಯಿಲನ ನಾಲ್ಕನೇ ಮಗನ ಹೆಂಡತಿಯ ಮಾವನಿಗೆ ಹೇಳಿಕೆ ಹೋಗಿಲ್ಲ' ಎಂದು ತಿಳಿದಾಗ ಮಾಯಿಲ ಪೆಚ್ಚಾಗಿದ್ದ. ಭೂತದಲ್ಲಿ ತಪ್ಪು ಒಪ್ಪಿಸಿಕೊಂಡ ಮಾಯಿಲ.

ಭೂತದ ಪ್ರಶ್ನೆಗಳಿಗೆ ಗುರಿಕಾರನೇ 'ಹೌದೂ', 'ಅಲ್ಲಾ' ಎಂದು ತಲೆಯಲ್ಲಾಡಿಸುತ್ತಿದ್ದ. ಭೂತ ಅಂಗಳದಲ್ಲಿ ಸೇರಿದ್ದ ಜನರ ಮಧ್ಯೆ ಅವರೆಲ್ಲರನ್ನೂ ಗುರುತಿಸಲು ಪ್ರಯತ್ನಿಸುತ್ತಿತ್ತು. ಹೆಣ್ಣುಭೂತ ಹೆಂಗಸರನ್ನೇ ದಿಟ್ಟಿಸುತ್ತಿತ್ತು. ಹೆಂಗಸರಿಗೆಲ್ಲಾ ಮೈಯೆಲ್ಲಾ ನಡುಕ. ಭೂತ, ಗುತ್ತಿನ ಮುತ್ತಪ್ಪ ಶೆಟ್ಟರ ಮುಖವನ್ನು ದಿಟ್ಟಿಸಿದಾಗ ಶೆಟ್ಟರು ಎದ್ದು ನಿಂತು 'ತಾನಿಲ್ಲಿದ್ದೇನೆ' ಎಂದು ಕೈಮುಗಿದು ಹೇಳಿ ತನ್ನನ್ನು ಗುರುತಿಸಿಕೊಟ್ಟರು. ಎಲ್ಲರೂ ತಮ್ಮ ತಮ್ಮ ಅಂತಸ್ತಿಗೆ ತಕ್ಕಂತೆ ಎದ್ದು ನಿಂತು ಭೂತಕ್ಕೆ ಮರ್ಯಾದೆ ಸಲ್ಲಿಸಿದರು.

ಭೂತದ ಮನಸ್ಸಿಗೆ ಸಮಾಧಾನವಾದಂತಾಯಿತು. ಮಧು ಹೇಳುವ ಸೋಮಯ್ಯ ಭೂತದೆದುರಿಗೆ ನಿಂತು ಭೂತವನ್ನ ಕೆಣಕಿ ನುಡಿಕಟ್ಟುಗಳನ್ನು ಹೇಳಲು ಪ್ರಯತ್ನಿಸುತ್ತಿದ್ದ. ಭೂತ ಮೊದ ಮೊದಲಿಗೆ ಬಾಯಿಬಿಡಲೊಪ್ಪಲಿಲ್ಲ. ನಂತರ ಸೋಮಯ್ಯನ ಕೆಣಕಾಟ ತಡೆಯಲಾರದೆ ನಿಧಾನಕ್ಕೆ ಬಾಯಿಬಿಡಲಾರಂಭಿಸಿತು.

'ಗದ್ದೆ ಹೂಳುತ್ತಿದ್ದ ಕೋಣ ಇದ್ದಕ್ಕಿದ್ದಂತೆ ಬಿದ್ದು ಸತ್ತಿದ್ದು, ಪಾಂಚಜ್ಜನ ಹೆಂಡತಿ ಚಾಪೆಯಲ್ಲೇ